# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 228 (177) |
| ಸದಸ್ಯರ ಹೆಸರು | : ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 10.12.2024 |
| ಉತ್ತರಿಸುವ ಸಚಿವರು | : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಗಂಧದ ಕಾರ್ಖಾನೆಯಲ್ಲಿ ಲಾವಂಚ ಬೇರಿನ ತೈಲದ ಬಳಕೆಯನ್ನು ನಿಲ್ಲಿಸುವ ನಿರ್ಣಯವನ್ನು ಡಿಸೆಂಬರ್-2020ರಲ್ಲೇ ಕೈಗೊಂಡಿದ್ದರೂ ಫೆಬ್ರುವರಿ-2021ರಲ್ಲಿ ರೂ.4.87ಕೋಟಿ ರೂ.ಗಳ ಲಾವಂಚ ಬೇರಿನ ತೈಲವನ್ನು ಖರೀದಿಸಲು ಯಾವ ಕಾರಣಕ್ಕಾಗಿ ಆದೇಶ ನೀಡಲಾಯಿತು; (ವಿವರ ನೀಡುವುದು). | 1) ವಾರ್ಷಿಕ ಬಿಲ್ ಆಫ್ ಮೆಟೀರಿಯಲ್ ಪ್ರಕಾರ 2020-21ನೇ ಆರ್ಥಿಕ ವರ್ಷಕ್ಕೆ ವಿವಿಧ ಮೈಸೂರು ಸ್ಯಾಂಡಲ್ ಶ್ರೇಣಿಯ ಸಾಬೂನುಗಳ ಉತ್ಪಾದನೆಗೆ ಅವಶ್ಯವಿರುವ ಸುಗಂಧದ್ರವ್ಯ ಮಿಶ್ರಣಕ್ಕೆ 6643 ಕೆಜಿ ಲಾವಂಚ ಬೇರಿನ ತೈಲದ (ವೆಟಿವರ್ಟ್ ಆಯಿಲ್) ಅಗತ್ಯವಿದ್ದರಿಂದ, ಅದರಂತೆ ಇ-ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್ ನಲ್ಲಿ ಭಾಗವಹಿಸಿ ಅರ್ಹರಾದ ಎಲ್-1 ಸರಬರಾಜುದಾರರಾದ ಮೆ: ಬನ್ನಾರಿ ಕನ್‌ಸ್ಟ್ರಕ್ಷನ್ ಸಂಸ್ಥೆಗೆ ಪ್ರತಿ ಕೆ.ಜಿ ಗೆ ರೂ.25,700/- ರಂತೆ ಒಟ್ಟು 6643 ಕೆ.ಜಿ ಲಾವಂಚ ಬೇರಿನ ತೈಲ (ವೆಟಿವರ್ಟ್ ಆಯಿಲ್) ಖರೀದಿಗಾಗಿ ಖರೀದಿ ಆದೇಶವನ್ನು ನೀಡಲಾಗಿರುತ್ತದೆ. (PO No.PERF-25 Dated: 29.07.2020). ಖರೀದಿ ಆದೇಶದ ಡೆಲಿವರಿ ಷೆಡ್ಯೂಲ್ ಪ್ರಕಾರ 6643 ಕೆ.ಜಿ ಸಾಮಗ್ರಿಯ ಪೈಕಿ 2020 ಡಿಸೆಂಬರ್ ಅಂತ್ಯದ ವೇಳೆಗೆ ಒಟ್ಟು 4750 ಕೆ.ಜಿ ಸಾಮಗ್ರಿಯನ್ನು ಸಂಸ್ಥೆಯಲ್ಲಿ ಸ್ವೀಕರಿಸಲಾಗಿದ್ದು. ಇನ್ನು 1893 ಕೆಜಿ ಸ್ವೀಕರಣೆಗೆ ಬಾಕಿಯಿರುತ್ತದೆ.<br><br>2) ಆರ್ಥಿಕ ವರ್ಷ 2020-21ರ ನಾಲ್ಕನೇ ತ್ರೈಮಾಸಿಕ ಅವಧಿಗೆ ಅವಶ್ಯವಿರುವ ಉತ್ಪನ್ನಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳ ಖರೀದಿಗೆ ಉತ್ಪಾದನಾ ವಿಭಾಗದಿಂದ ಬಿಲ್ ಆಫ್ ಮೆಟೀರಿಯಲ್ ಸ್ವೀಕರಿಸಿದ್ದು ನಂತರ ಹೆಚ್ಚುವರಿ ಬಿಲ್ ಆಫ್ ಮೆಟೀರಿಯಲ್ ಸ್ವೀಕರಿಸಿದ್ದು ಅದರಂತೆ ಈ ಅವಧಿಯ ಉತ್ಪಾದನೆಗೆ ಅವಶ್ಯವಿರುವ ಸುಗಂಧದ್ರವ್ಯಗಳನ್ನು ಸಿದ್ಧಪಡಿಸಲು 3064 ಕೆ.ಜಿ ಲಾವಂಚ ಬೇರಿನ ತೈಲದ (ವೆಟಿವರ್ಟ್ ಆಯಿಲ್) ಅವಶ್ಯಕತೆಯಿದ್ದು, ಆ ಸಮಯದಲ್ಲಿ ಸಂಸ್ಥೆಯ ಉಗ್ರಾಣದಲ್ಲಿ 1737.520 ಕೆ.ಜಿ ಯಷ್ಟು ಮಾತ್ರ ದಾಸ್ತಾನು ಇದ್ದು, ಈ ಸಂದರ್ಭದಲ್ಲಿ ಸಂಸ್ಥೆಯ |

ವಿಭಾಗಾಧಿಕಾರಿಗಳು ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಚರ್ಚಿಸಿ ನಿರ್ಧರಿಸಿದಂತೆ ನಾಲ್ಕನೇ ತ್ರೈಮಾಸಿಕ ಅವಧಿಗೆ ಅವಶ್ಯವಿರುವ ಸುಗಂಧ ದ್ರವ್ಯ ತಯಾರಿಸಲು ಖರೀದಿ ಆದೇಶದಂತೆ ಬಾಕಿ ಉಳಿದಿರುವ ಲಾವಂಚ ಬೇರಿನ ತೈಲವನ್ನು (ವೆಟಿವರ್ಟ್ ಆಯಿಲ್) ಪಡೆಯಲಾಗಿರುತ್ತದೆ.

3) ನಿರ್ದೇಶಕರ ಮಂಡಳಿಯ ನಿರ್ಣಯದಂತೆ ಸಂಸ್ಥೆಯು ಏಪ್ರಿಲ್-2021ರಿಂದ ಮೈಸೂರು ಸ್ಯಾಂಡಲ್ ಸೋಪ್ ಸುಗಂಧ ದ್ರವ್ಯವನ್ನು ವೆಟಿವರ್ಟ್ ತೈಲವನ್ನು ಬಳಸದೇ ತಯಾರಿಸಲು ತೀರ್ಮಾನಿಸಿ ಹಾಗೂ 2020-21ನೇ ಸಾಲಿನ ನಾಲ್ಕನೇ ತ್ರೈಮಾಸಿಕ ಅವಧಿಯ (ಜನವರಿ 2021 ರಿಂದ ಮಾರ್ಚ್ 2021) ರವರೆಗೆ ಉತ್ಪಾದನಾ ಚಟುವಟಿಕೆಗಳನ್ನು ಗಮನದಲ್ಲಿರಿಸಿ ಈಗಾಗಲೇ ನೀಡಿದ್ದ ಖರೀದಿ ಆದೇಶದಂತೆ (PO No.PERF-25 ದಿನಾಂಕ: 29.07.2020) ಸರಬರಾಜಿಗೆ ಬಾಕಿಯಿದ್ದ ಲಾವಂಚ ಬೇರಿನ ತೈಲವನ್ನು (ವೆಟಿವರ್ಟ್ ಆಯಿಲ್) ಖರೀದಿಸಿರುತ್ತದೆ.

4) ಪ್ರತಿ ಉತ್ಪಾದನಾ ಹಂತಗಳಲ್ಲಿ ಸುಗಂಧ ದ್ರವ್ಯಗಳ ಮಿಶ್ರಣಗಳನ್ನು ಪದೇ ಪದೇ ಬದಲಾಯಿಸಲು ಸಾಧ್ಯವಿರುವುದಿಲ್ಲ. ಹೊಸ ಸುಗಂಧದ್ರವ್ಯಗಳ ಮಿಶ್ರಣವನ್ನು ಸಿದ್ಧಪಡಿಸಬೇಕಾದಲ್ಲಿ ನಿರ್ಣಯಿಸಿರುವಂತೆ ಲಾವಂಚ ಬೇರಿನ ತೈಲವನ್ನು (ವೆಟಿವರ್ಟ್ ಆಯಿಲ್) ಬಳಸದೇ ಇದರ ಬದಲು ಬಳಸಬಹುದಾದ ಇತರೆ ಪರ್ಯಾಯ ಸಾಮಗ್ರಿಯನ್ನು ನಿಯಮಾನುಸಾರ ಇ-ಟೆಂಡರ್ ಮೂಲಕ ಖರೀದಿಸಬೇಕಾಗಿದ್ದು, ಇವುಗಳ ಖರೀದಿ ಪ್ರಕ್ರಿಯೆಗಳಿಗೆ ಕನಿಷ್ಠ 30 ರಿಂದ 45 ದಿನಗಳ ಕಾಲಾವಕಾಶ ಬೇಕಾಗುತ್ತದೆ. ಹೊಸ ಸುಗಂಧ ದ್ರವ್ಯ ಮಿಶ್ರಣವನ್ನು ಪರಿಷ್ಕರಿಸಿ ಕೂಡಲೇ ಬಳಸಲು ಸಾಧ್ಯವಿರುವುದಿಲ್ಲ. ಈ ಮಿಶ್ರಣವನ್ನು ಸಿದ್ಧಪಡಿಸಿ ನಂತರ ಇದು ಪರಿಪಕ್ವವಾಗಲು (maturity) ಸಮಯಾವಕಾಶ ನೀಡಬೇಕಾಗುತ್ತದೆ.

5) ಈ ಹಿನ್ನಲೆಯಲ್ಲಿ ಪ್ರತಿದಿನ 24 ಗಂಟೆಗಳೂ ಸತತವಾಗಿ ಉತ್ಪಾದನಾ ಚಟುವಟಿಕೆಗಳು ನಡೆಯುತ್ತಿದ್ದು, ಮಾರುಕಟ್ಟೆ ವಿಭಾಗದ ಬೇಡಿಕೆಯಂತೆ ಸಂಸ್ಥೆಯು ಪ್ರತಿ ದಿನ ಕನಿಷ್ಠ 85 ರಿಂದ 100 ಮೆಟ್ರಿಕ್ ಟನ್ ಸಾಬೂನುಗಳನ್ನು

| | | |
|---|---|---|
| | | ಉತ್ಪಾದನೆ ಮಾಡುತ್ತಿದ್ದು, ಇದರ ಪ್ರತಿದಿನದ ಒಟ್ಟು ಮೌಲ್ಯ ಸುಮಾರು ರೂ.5 ಕೋಟಿಯಷ್ಟಿದ್ದು, ಈ ಹಂತದಲ್ಲಿ ತಕ್ಷಣವೇ ಸುಗಂಧದ್ರುವದ ಮಿಶ್ರಣದಲ್ಲಿ ಬದಲಾವಣೆ ಮಾಡಲು ಸಾಧ್ಯವಾಗದೆ ನಿರಂತರ ಉತ್ಪಾದನಾ ಚಟುವಟಿಕೆಗಳು ಕುಂಟಿತವಾಗಿ ಸಂಸ್ಥೆಗೆ ಉಂಟಾಗಬಹುದಾದ ನಷ್ಟವನ್ನು ತಡೆಯಲು ಅನಿವಾರ್ಯವಾಗಿ ಖರೀದಿ ಆದೇಶದಂತೆ ಬಾಕಿ ಉಳಿದಿದ್ದ 1893 ಕೆ.ಜಿ ಲಾವಂಚ ಬೇರಿನ ತೈಲವನ್ನು (ವೆಟಿವರ್ಟ್ ಆಯಿಲ್) ಖರೀದಿಸಿ ಬಳಸಿ 2021 ಮಾರ್ಚ್ ಅಂತ್ಯದವರೆಗೆ ಸಾಬೂನುಗಳನ್ನು ತಯಾರಿಸಲು ಸುಗಂಧದ್ರವ್ಯದ ಮಿಶ್ರಣದಲ್ಲಿ ಬಳಸಲಾಗಿರುತ್ತದೆ.<br><br>6) ಆದರೆ, ಮುಂದಿನ ಹಂತದಲ್ಲಿ ಸುಗಂಧ ದ್ರವ್ಯ ಮಿಶ್ರಣದಲ್ಲಿ ಲಾವಂಚ ಬೇರಿನ ತೈಲವನ್ನು (ವೆಟಿವರ್ಟ್ ಆಯಿಲ್) ಬಳಸುವುದನ್ನು ಸ್ಥಗಿತಗೊಳಿಸಲಾಗಿರುತ್ತದೆ. ಆದ್ದರಿಂದ ಆ ಸಂದರ್ಭದಲ್ಲಿ ಉತ್ಪಾದನಾ ಪ್ರಮಾಣದಲ್ಲಿ ಉಂಟಾಗಬಹುದಾದ ನಷ್ಟವನ್ನು ತಡೆಯಲು ಸುಗಂಧದ್ರವ್ಯ ಮಿಶ್ರಣಕ್ಕೆ ಯಾವುದೇ ಪರ್ಯಾಯ ಆಯ್ಕೆಯಿಲ್ಲದ್ದರಿಂದ ಅನಿವಾರ್ಯವಾಗಿ 2021 ಮಾರ್ಚ್ ಅಂತ್ಯದವರೆಗಿನ ಉತ್ಪಾದನಾ ಚಟುವಟಿಕೆಗಳಿಗೆ ಪೂರಕವಾಗಿ ಖರೀದಿ ಆದೇಶದಂತೆ ಬಾಕಿ ಉಳಿದಿದ್ದ 1893 ಕೆಜಿ ಲಾವಂಚ ಬೇರಿನ ತೈಲವನ್ನು (ವೆಟಿವರ್ಟ್ ಆಯಿಲ್) ಖರೀದಿಸಿ ಉತ್ಪಾದನಾ ಚಟುವಟಿಕೆಗಳನ್ನು ಮುಂದುವರೆಸಲಾಗಿರುತ್ತದೆ.<br><br>7) ದಿನಾಂಕ: 25.06.2021ರಂದು ನಡೆದ 253ನೇ ಆಡಳಿತ ಮಂಡಳಿ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿರುತ್ತದೆ.ಸರಬರಾಜುದಾರರೊಂದಿಗೆ ಮಾಡಿಕೊಂಡ ಒಪ್ಪಂದದ ಭಾದ್ಯತೆಯಾಗಿ ಉಳಿದ 1893 ಕೆ.ಜಿ. ವೆಟಿವರ್ಟ್ ಆಯಿಲ್‌ನ್ನು ಪ್ರತಿ ಕೆ.ಜಿ.ಗೆ ರೂ. 25700 (inclusive of GST) ರಂತೆ ಖರೀದಿಸಲು ದಿನಾಂಕ: 13.02.2021ರಂದು ಸರಬರಾಜು ಆದೇಶವನ್ನು ನೀಡಿರುವ ಹಾಗೂ ಖರೀದಿಸಲಾದ ವೆಟಿವರ್ಟ್ ಆಯಿಲ್‌ನ್ನು ಬಳಕೆ ಮಾಡಿರುವ ಅಂಶವನ್ನು ಮಂಡಳಿಯು ಗಮನಿಸಿ, ಆಡಳಿತ ಮಂಡಳಿಯು ಕೈಗೊಂಡ ಕ್ರಮವನ್ನು ಅನುಮೋದಿಸಿರುತ್ತದೆ. |

| | | |
|---|---|---|
| ಆ) | ಮೈಸೂರು ಗಂಧದ ಕಾರ್ಖಾನೆಯಲ್ಲಿ ಲಾವಂಚ ಬೇರಿನ ತೈಲದ ಬಳಕೆಯನ್ನು ನಿಲ್ಲಿಸುವ ನಿರ್ಣಯವನ್ನು ಕೈಗೊಂಡ ಬಳಿಕವು ಕಾರ್ಖಾನೆಯಲ್ಲಿ 1737 ಕಿ.ಗ್ರಾಂಗಳ ದಾಸ್ತಾನೂ ಇದ್ದರೂ ಫೆಬ್ರುವರಿ-2021ರಲ್ಲಿ 1893 ಕಿ.ಗ್ರಾಂ ಖರೀದಿಗೆ ಆದೇಶ ನೀಡಿದವರು ಯಾರು: ಗುತ್ತಿಗೆದಾರನಿಗೆ ಲಾಭ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು?(ವಿವರ ನೀಡುವುದು) | ಮೇಲಿನ ಪ್ರಶ್ನೆ (ಅ) ರಲ್ಲಿ ವಿವರಿಸಿರುವಂತೆ ಸದರಿ ವಿಷಯದಲ್ಲಿ ಗುತ್ತಿಗೆದಾರನಿಗೆ ಯಾವುದೇ ರೀತಿಯಲ್ಲಿಯೂ ಲಾಭ ಮಾಡಿಕೊಳ್ಳಲು ಸಂಸ್ಥೆಯು ಅವಕಾಶ ಕಲ್ಪಿಸಿಕೊಟ್ಟಿಲ್ಲದಿರುವುದರಿಂದ ಅಂದಿನ ಅಧಿಕಾರಿಗಳ ಮೇಲೆ ಯಾವುದೇ ಕ್ರಮಗಳನ್ನು ಕೈಗೊಳ್ಳುವ ಸಂದರ್ಭ ಉದ್ಭವಿಸಿರುವುದಿಲ್ಲ. |

ಸಂಖ್ಯೆ: ಸಿಐ 57 ಸಿಪಿಎಂ 2024 (ಇ)

**(ಎಂ.ಬಿ ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.